## ಖಾಲಿ ತಲೆ

ಜೀವಶಾಸ್ತ್ರದ ಮೇಷ್ಟ್ರು 'ರಕ್ತ ಪರಿಚಲನೆ'ಯನ್ನು ವಿವರಿಸುತ್ತಾ ಇದ್ದರು. ವಿದ್ಯಾರ್ಥಿಗಳಿಗೆ ವಿಷಯ ಚೆನ್ನಾಗಿ ಮನದಟ್ಟಾಗಲಿ ಎಂದು ತಮ್ಮದೇ ಉದಾಹರಣೆ ಕೊಟ್ಟರು.

'ನೋಡ್ರಯ್ಯಾ, ನಾನು ನನ್ನ ತಲೆಯ ಮೇಲೆ ನಿಂತ್ಕೊಂಡ್ರೆ ರಕ್ತ ತಲೆಯೊಳಕ್ಕೆ ನುಗ್ಗುತ್ತೆ, ಆಗ ಮುಖ ಕೆಂಪಾಗುತ್ತೆ' ಎಂದರು.

'ಹೌದು ಸಾರ್' ಎಂದು ಕೂಗಿದರು ವಿದ್ಯಾರ್ಥಿಗಳು.

'ಆದರೆ ನಾನು ಕಾಲಿನ ಮೇಲೆ ನಿಂತುಕೊಂಡಾಗ, ರಕ್ತ ಕಾಲಿನೊಳಕ್ಕೆ ಹೋಗೋದಿಲ್ಲ, ಯಾಕೆ?' ಕೇಳಿದರು ಮೇಷ್ಟ್ರು.

ಕೊನೆಯ ಬೆಂಚಿನಲ್ಲಿದ್ದ ಕುಳ್ಳ ಹೇಳಿದ, 'ರಕ್ತ ನುಗ್ಗೋಕ್ಕೆ ಕಾಲಿನಲ್ಲಿ ಖಾಲಿ ಜಾಗ ಇರೋಲ್ಲ ಸಾರ್'.

**ಸಿದ್ದೇಶ್ ಸಣ್ಣಗಿರಿ**





## ಟಾರ್ಗೆಟ್

ಯಮರಾಜ 100 ಜನರನ್ನು ಕರೆದುಕೊಂಡು ಯಮಲೋಕಕ್ಕೆ ನಡೆದಿದ್ದರು. ನಡುರಸ್ತೆಯಲ್ಲಿ ನಾರದನ ಭೇಟಿಯಾಯಿತು.

ನಾರದ, 'ಇದೇನು ಯಮರಾಜರೆ? ಒಮ್ಮೆಲೇ 100 ಜನರನ್ನು ಕರೆದುಕೊಂಡು ನಡೆದಿದ್ದೀರಿ. ಕೆಲಸದ ಒತ್ತಡ ಬಹಳವಿದ್ದಂತೆ ಕಾಣುತ್ತದೆ' ಎಂದು ಕೇಳಿದರು.

ಯಮರಾಜ, 'ಏನು ಮಾಡುವುದು ಮುನಿಗಳೆ, ಮಾರ್ಚ್ ತಿಂಗಳ ಕೊನೆಯಲ್ಲವೆ? ಟಾರ್ಗೆಟ್ ಪೂರ್ಣಗೊಳಿಸಬೇಕಾಗಿದೆ...'

**ಎ.ಎ. ಸನದಿ**

ಚಿತ್ರಗಳು: ಗಣೇಶ ಆಚಾರ್ಯ